# ಅಪ್ಪನ ಕರೆ ಹೊರಗೆ ಕೇಳಿ ಬರುತ್ತಿದೆ...

### ಅಧ್ಯಾಯ–1

## ತುಳಸಿ ಗಿಡ

ಬ್ಯಾಂಕ್ ನೌಕರಿಯ ಭಾಗವಾಗಿ ಮೈಸೂರಿಗೆ ವರ್ಗವಾದಾಗ ಕ್ವಾರ್ಟರ್ಸ್ ಎಂದು ದೊರೆತಿದ್ದು ಮೂರನೇ ಮಹಡಿಯ ಒಂದು ಮನೆ – ಫ್ಲಾಟ್ ನಾನು ಅಲ್ಲಿ ವಾಸಿಸಲು ಶುರು ಮಾಡಿದ ನಂತರ ತಿಳಿಯಿತು, ಅದು ಆರಕ್ಕೂ ಹೆಚ್ಚು ತಿಂಗಳಿನಿಂದ ಖಾಲಿ ಇತ್ತೆಂದು. ಅದು ತಿಳಿದಾಗ ನನಗೇನೂ ವಿಶೇಷ ಅನ್ನಿಸಲಿಲ್ಲ. ಹೀಗಾಗಿ ನನ್ನ ಸ್ಮೃತಿಯಲ್ಲಿ ಆ ವಿಷಯ ಉಳಿಯಲಿಲ್ಲ.

ಮೂರನೇ ಮಹಡಿಯ ನಂತರ ಮೇಲೆ ಮತ್ತೆ ಮನೆಗಳಿಲ್ಲದ ಕಾರಣ ಬಿಡುವಾದಾಗ ಬಿಸಿಲುಮಚ್ಚಿಗೆ ಹೋಗಿ ಕೂಡುವುದು ನನ್ನ ಅಭ್ಯಾಸವಾಗಿತ್ತು. ಹೀಗೇ ಒಮ್ಮೆ ಕುಳಿತಿದ್ದಾಗ ಹಿಂದಿನ ರಸ್ತೆಯಲ್ಲಿ ಯಾವುದೋ ಶಬ್ದ ಕೇಳಿಸಿದಂತಾಗಿ ಕೆಳಗೆ ಬಗ್ಗಿ ನೋಡಿದೆ. ಎರಡು ಹಸುಗಳು ಗುದ್ದಾಡಿಕೊಳ್ಳುತ್ತಿದ್ದವು. ಒಂದೆರಡು ನಿಮಿಷ ಅದನ್ನು ನೋಡಿ ವಾಪಸು ಕೂರಲು ಹೊರಟಾಗ ಕೆಳಗಿದ್ದ ನನ್ನ ಫ್ಲಾಟಿನ ತುದಿಯಲ್ಲಿ ಆಚೆಗೆ ಬೆಳೆದಂತಿದ್ದ ಒಂದು ಸಣ್ಣ ಗಿಡ ನನ್ನ ಗಮನಸೆಳೆಯಿತು. ಅರೆ, ಇಷ್ಟು ದಿವಸದಿಂದ ನನ್ನ ಫ್ಲಾಟಿನಲ್ಲೇ ಇದ್ದು ನನ್ನ ಗಮನಕ್ಕೇ ಬಂದಿಲ್ಲದ ಇದ್ಯಾವ ಗಿಡ ಎಂದು ಕುತೂಹಲದಿಂದ ಕೆಳಗೆ ಹೋಗಿ, ಗ್ರಿಲ್ ಕಂಬಿಯ ಬಳಿ ಕುಳಿತು, ಬಗ್ಗಿ ನೋಡಿದೆ – ಅದೊಂದು ತುಳಸಿ ಗಿಡ. ನೆಲ ಮತ್ತು ಗೋಡೆಯ ನಡುವಿನ ಕಾಂಕ್ರೀಟ್ ಸಂದಿಯಲ್ಲಿ ಸ್ವಲ್ಪವೇ ಬೇರು ಬಿಟ್ಟು ಗೋಡೆಯಿಂದ ಸುಮಾರು ಒಂದು ಅಡಿಯಷ್ಟು ಮುಂದೆ ಚಾಚಿಕೊಂಡ ಗಿಡ.

ಮೇಲೆ ತಿಳಿಸಿದಂತೆ ನಾನು ಆ ಫ್ಲಾಟಿಗೆ ಬರುವುದಕ್ಕೆ ಮೊದಲು ಆರು ತಿಂಗಳು ಖಾಲಿಯಿದ್ದ ಮನೆಯದು. ಮೂರನೇ ಮಹಡಿಯದು. ಮೇಲೆ ಯಾವುದೇ ಮನೆಯಿಲ್ಲದೆ ಬಿಸಿಲುಮಚ್ಚು. ನಾನು ಒಬ್ಬನೇ ಇದ್ದ ಕಾರಣ ಯಾವುದೇ ಹೂಕುಂಡ ಅಥವಾ ಗಿಡಗಳನ್ನೇನೂ ಇಟ್ಟಿರಲಿಲ್ಲ. ಅಲ್ಲಿ ತುಳಸಿ ಗಿಡ ಬಂತಾದರೂ ಹೇಗೆ? ಅಕಸ್ಮಾತ್ತಾಗಿ ಬಂದಿದ್ದರೂ ಸಹಿತ ಆರು ತಿಂಗಳಿಗೂ ಹೆಚ್ಚಿಗೆ ನೀರು ಇತ್ಯಾದಿ ಯಾವುದೇ ಪೋಷಣೆಯೇ ಇಲ್ಲದೆ ಉಳಿದು ಬೆಳೆದಿದ್ದಾದರೂ ಹೇಗೆ?

ಕುತೂಹಲದಿಂದಾಗಿ ಮತ್ತೊಮ್ಮೆ ಮೇಲೆ ಹೋಗಿ ಆ ಗಿಡದ ಬೀಜ ಹೇಗೆ ಬಂದಿರಬಹುದು ಎಂದು ಹುಡುಕಿದೆ. ಬಿಸಿಲುಮಚ್ಚಿನಲ್ಲಿ ಯಾವುದಾದರೂ ತುಳಸಿ ಗಿಡ ಇರಬಹುದೇ ಎಂದು ಹುಡುಕಿದೆ. ಯಾವುದೇ ಗಿಡದ ಸೂಚನೆಯೂ ಇಲ್ಲದ ಜಾಗ. ಕಟ್ಟಡದ ಹಿಂಭಾಗದಲ್ಲಿ ಸುಮಾರು ಹದಿನೈದು ಅಡಿಯಷ್ಟು ಸಣ್ಣ ರಸ್ತೆಯ ನಂತರ ಹಿಂದಿನ ಮನೆಯ ಕಾಂಪೌಂಡ್. ಅದರಲ್ಲೊಂದಷ್ಟು ಗಿಡಗಳು. ನೆಲ ಮಟ್ಟದಿಂದ ಮೂರನೇ ಮಹಡಿಯ ಎತ್ತರಕ್ಕೆ ಬಂದಿರಬಹುದೇ ಎಂದು ಯೋಚಿಸಿದೆ. ಇಲ್ಲವೆನಿಸಿತು. ಆ ತುಳಸಿ ಗಿಡದ ಕ್ಲಿಷ್ಟ ಪರಿಸ್ಥಿತಿಯಲ್ಲಿ ಬದುಕುಳಿವ ಛಾತಿ ಅಥವ ಛಲ ಕಂಡು ಬೆರಗಾದೆ. ನನ್ನ ಮೊಬೈಲ್‌ನಲ್ಲಿ ಅದನ್ನು ಕ್ಲಿಕ್ಕಿಸಿದೆ.

ಅದಾದ ಸ್ವಲ್ಪ ದಿನಗಳಲ್ಲೇ ನನಗೆ ಬೆಂಗಳೂರಿಗೆ ವರ್ಗವಾಯಿತು. ನಂತರ ಅದು ನನ್ನ ಸ್ಮೃತಿಪಟಲದಿಂದ ಮರೆಯಾಯಿತು.

### ಅಧ್ಯಾಯ–2

## ಗುಬ್ಬಚ್ಚಿ ಕುಟುಂಬ

ಬ್ಯಾಂಕ್ ಕೆಲಸದ ಮೇಲೆ ಹೋದ ವರ್ಷ ವಾಣಿಜ್ಯ ರಾಜಧಾನಿ ಮುಂಬೈಗೆ ಎರಡು ದಿನದ ಮಟ್ಟಿಗೆ ಹೋಗಬೇಕಾಗಿತ್ತು. ಕೆಲಸದ ಜಾಗಕ್ಕೆ ಹತ್ತಿರವಾಗಿರಲೆಂದು ನರಿಮನ್ ಪಾಯಿಂಟ್‌ನಲ್ಲಿ ಒಂದು ಹೋಟೆಲ್ ರೂಮ್ ಮಾಡಿ ಉಳಿದುಕೊಂಡಿದ್ದೆ. ನನ್ನ ರೂಮು ಐದನೇ ಮಹಡಿಯಲ್ಲಿ. ಮೇಲೆ ಇನ್ನೂ ಹಲವಾರು ಮಹಡಿಗಳಿದ್ದವು.

ಎಂದಿನ ಅಭ್ಯಾಸದಂತೆ ಬೆಳಿಗ್ಗೆ ಆರು ಗಂಟೆಗೆ ಎದ್ದು, ಪಕ್ಕದಲ್ಲೇ ಇದ್ದ ಸಮುದ್ರ ದಂಡೆಯ ಮರೈನ್ ಡ್ರೈವ್‌ನಲ್ಲಿ ತಿರುಗಾಡಲು ತಯಾರಾಗುತ್ತಿದ್ದೆ. ಪಕ್ಕದಲ್ಲೇ ಇದ್ದ ಕಿಟಕಿಯಿಂದ ಒಂದು ಚಿರ ಪರಿಚಿತ ಧ್ವನಿ ಕೇಳಿಸಿದಂತೆ ಭಾಸವಾಯಿತು. ನನಗೆಲ್ಲೋ ಭ್ರಮೆ ಇರಬೇಕೆಂದುಕೊಂಡು ಕೆಲಸ ಮುಂದುವರಿಸಿದೆ. ಮುಂದಿನ ಕ್ಷಣ ಮತ್ತೊಮ್ಮೆ ಅದೇ ಧ್ವನಿ – ಚಿಲಿಪಿಲಿ. ಭ್ರಮೆ ದೂರವಾಗಿ ತಕ್ಷಣ ಕಿಟಕಿಯ ಗಾಜನ್ನು ಸರಿಸಿ ಹೊರಗೆ ಬಗ್ಗಿ ನೋಡಿದರೆ ಪಕ್ಕದ ಕಿಟಕಿಯ ಸಜ್ಜೆ ಹಾಗೂ ಅದರ ಕೆಳಗಿದ್ದ ಹವಾನಿಯಂತ್ರಕದ (ಏಸಿ) ನಡುವಿನ ಸಣ್ಣ ಜಾಗದಲ್ಲಿ ಒಂದು ಮುದ್ದಾದ ಗುಬ್ಬಚ್ಚಿ ಕುಟುಂಬ. ಮೂರು ಮರಿಗಳ ಚಿಲಿಪಿಲಿ ಧ್ವನಿ. ಪಕ್ಕದಲ್ಲೇ ಇದ್ದು ಅವುಗಳನ್ನು ಕಾಯುತ್ತಿದ್ದ ಅಪ್ಪ–ಅಮ್ಮ. ಕಿಟಕಿಯಿಂದ ಬಗ್ಗಿ ಐದನೇ ಮಹಡಿಯಿಂದ ಹೊರಗೆ ನೋಡುವುದೇ ಕಷ್ಟವಾಗಿತ್ತು. ಹೀಗಾಗಿ ಫೋಟೊ

